# ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ನವೀನ್ ಕೆ.ಎಸ್. ರವರು ನಿಯಮ 330ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.

*******

ಪ್ರಶ್ನೆ: ಬೆಂಗಳೂರು ನಗರವು ವಿಶ್ವದ ಐಟಿ ಹಬ್ ಎಂಬುದಾಗಿ ಗುರುತಿಸಿಕೊಂಡಿದ್ದು, ಹಲವಾರು ಸ್ಟಾರ್ಟ್ ಅಪ್‌ಗಳು ಸೇರಿದಂತೆ ತಂತ್ರಜ್ಞಾನ ಆಧರಿತ ನವೋದ್ಯಮಗಳ ರಾಜಧಾನಿಯಾಗಿರುವುದು ಸಂತಸದ ವಿಷಯ. ತಂತ್ರಜ್ಞಾನ ಆಧಾರಿತ ನವೋದ್ಯಮಗಳಲ್ಲಿ ಹೊಸ ಹೊಸ ಆಪ್‌ಗಳ ಅಭಿವೃದ್ಧಿಯು ಒಂದು ಪ್ರಮುಖ ಅಂಶವಾಗಿದೆ. ಈ ಆಪ್‌ಗಳಲ್ಲಿ ತತ್‌ಕ್ಷಣಕ್ಕೆ ಸಾಲ ನೀಡುವ ಆಪ್‌ಗಳು, ಗೇಮಿಂಗ್ ಆಪ್‌ಗಳು ಸೇರಿವೆ. ಸುಲಭವಾಗಿ ಬಳಕೆಗೆ ಲಭ್ಯವಾಗುವ ಈ ಆಪ್‌ಗಳು ಹಲವಾರು ಯುವಜನತೆ, ಬಡವರು, ಕೂಲಿ ಕಾರ್ಮಿಕರು, ಮಕ್ಕಳನ್ನು ಆಕರ್ಷಿಸಿ ವ್ಯಸನಕ್ಕೆ ಕಾರಣವಾಗಿರುವುದಲ್ಲದೇ, ಇದರಿಂದ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಪತ್ರಿಕಾ ಮಾಧ್ಯಮಗಳಲ್ಲಿ ಗಮನಿಸಿರುವುದಾಗಿದೆ. ಈ ರೀತಿಯ ಗಂಭೀರ ವಿಷಯದ ಕುರಿತು.

ಉತ್ತರ:

ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಲೋನ್ ಆಪ್ ಮತ್ತು ಗೇಮಿಂಗ್ ಆಪ್‌ಗಳ ಮೂಲಕ ಬೆಟ್ಟಿಂಗ್ ದಂಧೆ ಕುರಿತಂತೆ ದಾಖಲಾದ ಪ್ರಕರಣಗಳ ವಿವರ.

| ಕ್ರಸಂ. | ಆಪ್‌ಗಳು | 2020 | 2021 | 2022 |
|---|---|---|---|---|
| 1 | ಅಕ್ರಮ ಲೋನ್ ಆಪ್‌ಗಳ ವಿರುದ್ಧ | 6 | 29 | 437 |
| 2 | ಗೇಮಿಂಗ್ ಆಪ್‌ಗಳ ಮೂಲಕ ಬೆಟ್ಟಿಂಗ್ ದಂಧೆಯಲ್ಲಿ ತೊಡಗುವಂತವರ ವಿರುದ್ಧ | 9 | 9 | 29 |

ಇಂತಹ ಕೃತ್ಯಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವರದಿಯಾಗಿರುವ ಪ್ರಕರಣಗಳ ಅಂಕಿಅಂಶಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| ವರ್ಷ | 2020 | 2021 | 2022 |
|---|---|---|---|
| ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟವರ ಸಂಖ್ಯೆ: | 1 | 1 | 1 |

ಈ ಕುರಿತಂತೆ ಪೊಲೀಸ್ ಮಹಾನಿರ್ದೇಶಕರು, ಸಿಐಡಿ, ಸೈಬರ್ ಕ್ರೈಂ ವಿಭಾಗದಲ್ಲಿ ದಾಖಲಾಗಿರುವ ಪ್ರಕರಣಗಳ ಮಾಹಿತಿ ಕೆಳಕಂಡಂತಿದೆ.

1. **ಸಿಐಡಿ, ಸಿ.ಸಿ.ಪಿ.ಎಸ್. ಮೊ.ಸಂ. 18/2020 ಕಲಂ: 66(ಸಿ), 66(ಡಿ), 72(ಎ) ಐ.ಟಿ.ಕಾಯ್ದೆ 2008, 419, 420, 385, 509 ಐ.ಪಿ.ಸಿ.**

ಫಿರ್ಯಾದಿದಾರರು ಸಾಲ ಒದಗಿಸುವ ಆಪ್‌ಗಳಾದ ಕಿಸ್ತತ್, ಕ್ರೆಡಿಟ್ ಹಬ್, ಮ್ಯಾಡ್ ಎಲಿಫೆಂಟ್, ಸ್ವಾರ್ ಲೋನ್, ಕ್ವಿಕ್‌ಮನಿ, ಪಾಂಡಾರುಪೀ ಇತ್ಯಾದಿ ಆಪ್‌ಗಳ ಮೂಲಕ ಸಾಲ ಪಡೆದಿದ್ದು, ಸದರಿ ಸಾಲದ ಆಪ್ ಕಂಪನಿಗಳು ಹೆಚ್ಚಿನ ಶುಲ್ಕ ಮತ್ತು ಬಡ್ಡಿದರಗಳನ್ನು ಹೇರಲು ಶುರುಮಾಡಿದ್ದು, ಫಿರ್ಯಾದಿದಾರರು ನಿಗದಿತ ಅವಧಿಯಲ್ಲಿ ಸಾಲವನ್ನು ಮರುಪಾವತಿಸಲು ವಿಫಲರಾದಾಗ ಆಕೆಗೆ ಮೊಬೈಲ್, ವಾಟ್ಸ್‌ಆಪ್ ಕರೆ, ಸಂದೇಶಗಳ ಮೂಲಕ ಅನುಚಿತವಾಗಿ ನಿಂದನೆ ಮಾಡಿ ಕಿರುಕುಳ ನೀಡಿದ್ದು, ಫಿರ್ಯಾದಿದಾರರ ದೂರಿನ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ.

ತನಿಖಾ ಸಮಯದಲ್ಲಿ ಆರೋಪಿಗಳು ಬೆಂಗಳೂರಿನಲ್ಲಿ ಮ್ಯಾಡ್ ಎಲಿಫೆಂಟ್ ನೆಟ್‌ವರ್ಕ್ ಟೆಕ್ನಾಲಜಿ ಪ್ರೈ. ಲಿ. ಕಂಪನಿಯ ಮೂಲಕ ಕಾರ್ಯಾಚರಿಸುತ್ತಿದ್ದುದು ಕಂಡು ಬಂದಿದ್ದು, ಸದರಿ ಕಂಪನಿಯ ವಿದೇಶಿ ಮೂಲದ ಒಬ್ಬ ವ್ಯಕ್ತಿ ಸೇರಿದಂತೆ ಇಬ್ಬರು ನಿರ್ದೇಶಕರು, ಒಬ್ಬರು ಹೆಚ್‌ಆರ್

ವ್ಯವಸ್ಥಾಪಕರು ಭಾಗಿಯಾಗಿರುವುದು ಕಂಡುಬಂದಿರುತ್ತದೆ. ಸದರಿ ಲೋನ್ ಆಪ್ ತಂತ್ರಾಂಶಗಳನ್ನು ವಿದೇಶದಲ್ಲಿ ತಯಾರಿಸಿ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಅಪ್‌ಲೋಡ್ ಮಾಡಿರುವುದು ಕಂಡುಬಂದಿರುತ್ತದೆ. ಹಾಗೆಯೇ ಆರೋಪಿಗಳು ವಿವಿಧ ಉಚ್ಚ ನ್ಯಾಯಾಲಯಗಳು, ರಾಜ್ಯ ಪೊಲೀಸ್‌ಗಳ ಲೋಗೋಗಳ ಮೂಲಕ ನಕಲಿ ನೋಟೀಸ್‌ಗಳು, ಆಧಾರ್ ಕಾರ್ಡ್ ಇತ್ಯಾದಿಗಳನ್ನು ವಿದೇಶದಲ್ಲಿ ತಯಾರಿಸಿ, ಸಂತ್ರಸ್ತರನ್ನು ಹೆದರಿಸಲು ಕಳುಹಿಸಿಕೊಡುತ್ತಿದ್ದುದು ಕಂಡುಬಂದಿರುತ್ತದೆ. ಭಾರತದ ಅಕೌಂಟೆಂಟ್ ಒಬ್ಬರು ವಿದೇಶ ಮೂಲದ ವ್ಯಕ್ತಿಗಳಿಗೆ ವಿದೇಶದಿಂದಲೇ ಕಂಪನಿಯ ಬ್ಯಾಂಕ್ ಖಾತೆಗಳನ್ನು ಕಾರ್ಯಾಚರಿಸಲು ಪರೋಕ್ಷ ನಿಯಂತ್ರಣವನ್ನು ನೀಡಿರುವುದು ಕಂಡುಬಂದಿರುತ್ತದೆ.

ಈ ಪ್ರಕರಣದಲ್ಲಿ 11 ವಿದೇಶ ಪ್ರಜೆಗಳೂ ಸೇರಿದಂತೆ 24 ಗುಮಾನಿ ಆಸಾಮಿಗಳನ್ನು ಪತ್ತೆಹಚ್ಚಲಾಗಿದ್ದು, 4 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಈ ಹಗರಣದ ಹಿಂದಿನ 59 ಎನ್‌ಬಿಎಫ್‌ಸಿ ಮತ್ತು ಫಿನ್‌ಟೆಕ್ ಕಂಪನಿಗಳನ್ನು ಪತ್ತೆ ಮಾಡಲಾಗಿದ್ದು, ರೇಜರ್ ಪೇ ಖಾತೆಯಲ್ಲಿ 64 ಕೋಟಿ ರೂಪಾಯಿಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಪ್ರಕರಣವು ತನಿಖಾ ಹಂತದಲ್ಲಿದ್ದು, ತನಿಖೆ ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

2. **ಸಿಸಿಪಿಎಸ್ ಮೊ ಸಂ 19/2020 ಕಲಂ 66, 66(ಸಿ), 67 ಆಫ್ ಐ.ಟಿ. ಆಕ್ಟ್ ಮತ್ತು 384, 419, 420 ಐ.ಪಿ.ಸಿ.**

ದಿನಾಂಕ 23-07-2020 ರಂದು ಪಿರ್ಯಾದುದಾರರು Kisshit app ಮುಖಾಂತರ ರೂ.4503/- ಗಳನ್ನು ಸಾಲವಾಗಿ ಪಡೆದಿದ್ದು, ಆ ಸಾಲವನ್ನು ತೀರಿಸಲು ಸಾಲ ನೀಡುವ ಬೇರೆ ಆಪ್‌ಗಳಿಂದ **(My bank, Money box, Loan gram, Coco cash, Panda Rupee, Cashpot, need Rupee)** ಸಾಲವನ್ನು ಪಡೆದಿರುತ್ತಾರೆ. ಅವರಿಂದ ಕಡಿಮೆ ಹಣವನ್ನು ಸಾಲದ ರೂಪದಲ್ಲಿ ಪಡೆದು, ಸಾಲ ತೀರಿಸುವಾಗ ಮಂಜೂರಾದ ಅಷ್ಟು ಹಣವನ್ನು ತಾವು ಮರುಪಾವತಿ ಸಹ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೂ ಸಹ ಈ ಮೇಲೆ ತಿಳಿಸಿದ ಲೋನ್ ಆಪ್‌ನ ಪ್ರತಿನಿಧಿಗಳೆಂದು ಕೆಲವರು ತನ್ನ ಮೊಬೈಲ್ ನಂಬರ್‌ಗೆ ಬೇರೆ ಬೇರೆ ನಂಬರ್‌ಗಳಿಂದ ಕರೆ ಮಾಡಿ ಅಸಂಬದ್ಧ, ಅಶ್ಲೀಲ ಸಂದೇಶಗಳನ್ನು ವಾಟ್ಸ್ ಆಪ್ ಮುಖಾಂತರ ಕಳುಹಿಸಿ, ಹಣವನ್ನು ನೀಡದಿದ್ದಲ್ಲಿ ಪಿರ್ಯಾದುದಾರರ ಮೊಬೈಲ್ ಸಂಪರ್ಕದಲ್ಲಿರುವ ಹಾಗೂ ವಾಟ್ಸ್ ಆಪ್ ಗ್ರೂಪ್‌ನಲ್ಲಿರುವವರೆಲ್ಲರಿಗೂ ಪಿರ್ಯಾದುದಾರರ ಫೋಟೋಗಳನ್ನು ಹಾಗೂ ಅಶ್ಲೀಲ ಸಂದೇಶಗಳನ್ನು ಕಳುಹಿಸುವುದಾಗಿ ಹಾಗೂ ಕರೆ ಮಾಡುವುದಾಗಿ ಬೆದರಿಸಿ ಮಾನಸಿಕ ಹಿಂಸೆ ನೀಡಿ ದೈಹಿಕ ಸಂಪರ್ಕಕ್ಕಾಗಿಯೂ ಬೆದರಿಕೆ ಹಾಕಿ ತಮ್ಮ ಮೊಬೈಲ್ ನಂಬರ್ ಅನ್ನು ಅಶ್ಲೀಲ ವೆಬ್‌ಸೈಟ್‌ಗಳಲ್ಲಿ ಹಾಕಿ ಕಾಲ್‌ಗರ್ಲ್ ಎಂದು ಹೇಳಿ ಬೆದರಿಕೆ ಹಾಕುತ್ತಿದ್ದಾರೆಂದು ತಿಳಿಸಿರುತ್ತಾರೆ ಹಾಗೂ ಇವರುಗಳ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೊಟ್ಟ ದೂರಾಗಿರುತ್ತದೆ.

ಪ್ರಕರಣದಲ್ಲಿ ತನಿಖೆ ಕೈಗೊಂಡು 02 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದ್ದು, ಇನ್ನೂ ಹೆಚ್ಚಿನ ತನಿಖೆ ಕೈಗೊಂಡಿದ್ದು, ಪ್ರಕರಣವು ತನಿಖಾ ಹಂತದಲ್ಲಿದೆ.

3. **ಸಿಐಡಿ, ಸಿ.ಸಿ.ಪಿ.ಎಸ್. ಮೊ.ಸಂ. 08/2021 ಕಲಂ: 66(ಡಿ) ಐ.ಟಿ.ಕಾಯ್ದೆ 2008, 420 ಐಪಿಸಿ, 21, 23 ಜೊತೆಗೆ 3 & 5 ಬಡ್ಸ್ ಕಾಯ್ದೆ 2019:**

ದಿನಾಂಕ: 01-06-2021 ರಂದು ಶ್ರೀ ಅಭಿಷೇಕ್ ಅಭಿನವ್ ಆನಂದ್, ಮ್ಯಾನೇಜರ್ ಲೀಗಲ್, ರೇಜರ್‌ಪೇ ಸಾಫ್ಟ್‌ವೇರ್ ಪ್ರೈ. ಲಿ., ಬೆಂಗಳೂರು ಇವರು ಸಿಐಡಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ಸದರಿ ದೂರಿನಲ್ಲಿ ತಮ್ಮ ಕಂಪನಿಯಲ್ಲಿ ಪೇಮೆಂಟ್‌ಗೇಟ್

ವೇ ಸರ್ವಿಸ್‌ಗಾಗಿ ನೊಂದಾಯಿಸಿಕೊಂಡಿದ್ದ ಬುಲ್‌ಫಿಂಚ್ ಸಾಫ್ಟ್‌ವೇರ್ ಪ್ರೈ. ಲಿ., ಸೇರಿದಂತೆ 13 ಆರೋಪಿತ ಕಂಪನಿಗಳು, ತಾವು ನೊಂದಾಯಿಸಿಕೊಂಡಿದ್ದ ಉದ್ದೇಶವನ್ನು ಹೊರತುಪಡಿಸಿ 'ಪವರ್‌ಬ್ಯಾಂಕ್' ಎಂಬ ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಅಪ್ಲಿಕೇಷನ್ ಮೂಲಕ ಅಕ್ರಮವಾಗಿ ಸಾರ್ವಜನಿಕರಿಂದ ಹಣವನ್ನು ಹೂಡಿಕೆ ಮಾಡಿಸಿಕೊಳ್ಳುತ್ತಿದ್ದು, ಆ ಮೂಲಕ ತಾವು ನೊಂದಾಯಿಸಿದ ವ್ಯಾಪರೋದ್ದೇಶವನ್ನು ಹೊರತುಪಡಿಸಿ ಇತರೆ ಉದ್ದೇಶಕ್ಕಾಗಿ ತಮ್ಮ ಸೇವೆಯನ್ನು ದುರಪಯೋಗಪಡಿಸಿಕೊಂಡು ವಂಚಿಸಿದ್ದು, ಆ ನಂತರ ಕಸ್ಟಮರ್ ದೂರುಗಳ ಮೂಲಕ ಸದರಿ ಕಂಪನಿಗಳು ಸಾರ್ವಜನಿಕರಿಂದ ಹೂಡಿಕೆ ಮಾಡಿಸಿಕೊಂಡ ಹಣಕ್ಕೆ ಯಾವುದೇ ಲಾಭವನ್ನು ನೀಡದೇ, ಹೂಡಿಕೆ ಮಾಡಿದ ಅಸಲನ್ನೂ ನೀಡದೇ ಸಾರ್ವಜನಿಕರಿಗೆ ವಂಚಿಸಿರುವುದು ಕಂಡುಬಂದಿದ್ದು, ಆರೋಪಿತ ಕಂಪನಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಸದರಿ ದೂರಿನ ಮೇಲೆ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ಇಬ್ಬರು ವಿದೇಶಿ ನಾಗರೀಕರು, ಇಬ್ಬರು ಟಿಬೇಟಿಯನ್ ನಾಗರೀಕರೂ ಸೇರಿದಂತೆ 11 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದ್ದು, 700ಕ್ಕೂ ಹೆಚ್ಚು ಅಕ್ರಮ ಫಲಾನುಭವಿ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಪವರ್ ಬ್ಯಾಂಕ್ ಆಪ್‌ಅನ್ನು ವಿದೇಶದಿಂದ ಅಪ್‌ಲೋಡ್ ಮಾಡಿರುವುದು ಹಾಗೂ ಬ್ಯಾಂಕ್ ಖಾತೆಗಳನ್ನು ವಿದೇಶಿ ಮೂಲದ ವ್ಯಕ್ತಿಗಳು ನಿಯಂತ್ರಿಸುತ್ತಿರುವುದು ಕಂಡುಬಂದಿರುತ್ತದೆ. ಹಾಗೆಯೇ ಸದರಿ ಕಂಪನಿಗಳು ಏಜೆಂಟ್‌ಗಳ ಮೂಲಕ ವಿವಿದ ವಿದೇಶಗಳಿಂದ ತಮ್ಮ ಸ್ನೇಹಿತರು ಮತ್ತು ಸಂಬಂಧಿಕರಿಂದ ಹಣ ಪಡೆಯುತ್ತಿದ್ದ ಭಾರತೀಯರ ಖಾತೆಗೆ ಅಕ್ರಮ ವರ್ಗಾವಣೆ ಮಾಡುತ್ತಿದ್ದು, ಅಂತಾರಾಷ್ಟ್ರೀಯ ಹವಾಲಾ ವರ್ಗಾವಣೆಯಲ್ಲಿ ಭಾಗಿಯಾಗಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಮಾಹಿತಿಯನ್ನು ವಿವಿಧ ರಾಜ್ಯ ಮತ್ತು ಕೇಂದ್ರ ಸರ್ಕಾರದ **(MEITY) Ministry of Electronics and Information Technology** ಕಾನೂನು ಜಾರಿ ಸಂಸ್ಥೆಗಳೊಂದಿಗೆ ಸೂಕ್ತ ಕ್ರಮಕ್ಕಾಗಿ ಹಂಚಿಕೊಳ್ಳಲಾಗಿದೆ.

ಪ್ರಕರಣವು ತನಿಖಾ ಹಂತದಲ್ಲಿದ್ದು, ತನಿಖೆ ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

**ಸಂಖ್ಯೆ: ಒಇ 540 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು